ಎಲ್ ಎ ಸಿ ನಂ. 5687/2021
ಪಿ.ಡಬ್ಲ್ಯೂ.1

**ಸಾಕ್ಷಿಯನ್ನು ದಿನಾಂಕ 11.03.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ಎಜಿಪಿ ರವರಿಂದ**

ಎದುರುದಾರರು ಭೂಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನೋಟಿಸ ನೀಡಿ, ಜಮೀನಿಗೆ ಭೇಟಿಕೊಟ್ಟಿರುತ್ತಾರೆ ಅಂದರೆ ಸರಿ. ಎದುರುದಾರರು ನನ್ನ ಸಮಕ್ಷಮ ಸ್ಥಳತನಿಖೆ ಕೈಗೊಂಡಿದ್ದಾರೆ ಅಂದರೆ ಸರಿಯಲ್ಲ. ಸ್ಥಳತನಿಖೆ ಕಾಲಕ್ಕೆ ನಮ್ಮ ಜಮೀನು ನೀರಾವರಿ ಜಮೀನು ಅಲ್ಲ ಎಂದು ಕಂಡುಬಂದಿರುತ್ತದೆ ಅಂದರೆ ಸರಿಯಲ್ಲ. ನನಗೆ ನೋಟಿಸ ಕೊಟ್ಟಿರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಗದಿತ ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ನಿ.ಪಿ.4 ರಿಂದ 7 ನಮ್ಮ ಜಮೀನಿಗೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಲುವಾಗಿ ನಿ.ಪಿ.4 ರಿಂದ 7 ನ್ನು ಸುಳ್ಳು ಸೃಷ್ಟಿಮಾಡಿದ್ದೇನೆ ಅಂದರೆ ಸರಿಯಲ್ಲ. ನಿಪಿ.8 ಮತ್ತು 9 ರಲ್ಲಿ ಕಂಡುಬರುವ ಅಂಶ ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಂಡ ಜಮೀನುನೀರಾವರಿ ಜಮೀನು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಮ್ಮ ಜಮೀನಿನಿಂದ ಎಕರೆಗೆ 26 ಲಕ್ಷ ರೂ. ಆದಾಯ ಇದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಅಂದರೆ ಸರಿಯಲ್ಲ. ಎದುರುದಾರರು ಯೋಗ್ಯ ಪರಿಹಾರ ನೀಡಿದ್ದಾರೆ ಅಂದರೆ ಸರಿಯಲ್ಲ. ಖರೀದಿ ಕರಾರುಪತ್ರಗಳ ಅವಧಿ ಮುಗಿದಿದ್ದು, ಅದರಡಿಯಲ್ಲಿ ಇನ್ನೂ ಖರೀದಿ ಪತ್ರಗಳು ಆಗದೇ ಇರುವ ಕಾರಣ, ಸದರಿ ದಾಖಲೆಗಳನ್ನು ಹೆಚ್ಚಿನ ಪರಿಹಾರಕ್ಕೆಂದು ಖೊಟ್ಟಿಯಾಗಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ.

2. ಎದುರುದಾರರು ಕಡಿಮೆ ಮಾರುಕಟ್ಟೆ ಬೆಲೆಯ ಖರೀದಿಪತ್ರಗಳನ್ನು ಅನುಸರಿಸಿ ನಮ್ಮ ಜಮೀನುಗಳಿಗೆ ಕಡಿಮೆ ಮಾರುಕಟ್ಟೆ ಬೆಲೆ ನಿಗದಿಪಡಿಸಿ, ಕಡಿಮೆ ಪರಿಹಾರ ಕೊಟ್ಟಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿ ದಾಳಿಂಬೆ ಮತ್ತು ಅರಿಶಿಣ ಬೆಳೆ

ಬೆಳೆಯುತ್ತಿದ್ದೆವು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಭೂಸ್ವಾಧೀನ ಪೂರ್ವದಲ್ಲಿ ಜಮೀನುಗಳ ಕಿಮ್ಮತ್ತು ಎಕರೆಗೆ 4 ಕೋಟಿ ರೂ. ಗೂ ಅಧಿಕ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ರಿ.ಸ.ನಂ.83/3/2 ನಲ್ಲಿ 2-ತೆಂಗಿನ ಗಿಡಗಳು ಇರುವ ಬಗ್ಗೆ ಐತೀರ್ಪಿನಲ್ಲಿ ನಮೂದು ಇಲ್ಲ ಅಂದರೆ ಅವರು ನಮೂದು ಮಾಡಿರುವುದಿಲ್ಲ ಎಂದು ಹೇಳುತ್ತೇನೆ. ಹಾಜರುಪಡಿಸಿರುವ ಉತಾರೆಗಳಲ್ಲಿ ಗಿಡಗಳ ಸಂಖ್ಯೆ ಶೂನ್ಯ ಎಂದು ಕಾಣಿಸಿದ್ದಾರೆ ಅಂದರೆ ಆ ರೀತಿ ಕಾಣಿಸಿದ್ದಾರೆ, ಆದರೆ ಗಿಡಗಳು ಇವೆ ಎಂದು ಹೇಳುತ್ತೇನೆ.

3. ಹೆಚ್ಚಿನ ಮೊತ್ತದ ಕ್ರಯ ದಸ್ತಾವೇಜಗಳನ್ನು ಪರಿಗಣಿಸದೇ ಭೂಸ್ವಾಧೀನಾಧಿಕಾರಿಗಳು ಕಡಿಮೆ ಪರಿಹಾರವನ್ನು ಘೋಷಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಐತೀರ್ಪು ರಚಿಸುವಾಗ ಯಾವುದೇ ನೋಟಿಸ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅರ್ಜಿ ಸ್ವತ್ತಿನಲ್ಲಿ ಎಕರೆಗೆ 60 ರಿಂದ 70 ಟನ್ ಕಬ್ಬು ಬೆಳೆಯಲಾಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿ ಟನ್ ಗೆ 3700 ರೂ. ಬೆಲೆ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅರ್ಜಿ ಜಮೀನಿನಲ್ಲಿ ಹುರುಳಿ, ಶೇಂಗಾ, ಮೆಣಸಿನಕಾಯಿ, ಸೂರ್ಯಕಾಂತಿ, ಈರುಳ್ಳಿ ಬೆಳೆಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿ ಎಕರೆಗೆ 40 ಟನ್ ಕಬ್ಬಿನ ಮೇವಿನ ವಾಡಿ ದೊರೆಯುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾಡಿ ಮಾರಾಟದಿಂದ ವರ್ಷಕ್ಕೆ 32000/- ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಂದಿ ಸಹಕಾರ ಸಂಘ ಕಾರ್ಖಾನೆ ಮತ್ತು ಜಮಖಂಡಿ ಶುಗರ್ಸ ಅರ್ಜಿ ಜಮೀನಿನ ಅಕ್ಕಪಕ್ಕ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿ.ಪಿ.8 ತೀರ್ಪಿನ ವಿರುದ್ಧ ಸರ್ಕಾರದವರು ಮೇಲ್ಮನವಿ ಸಲ್ಲಿಸಿರುವುದರಿಂದ ಸದರಿ ತೀರ್ಪು ನಮಗೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ನನ್ನ ಜಮೀನಿಗೆ 4 ಕೋಟಿ ರೂ. ಬೆಲೆ ಎಂದು ತೋರಿಸಲು ನಾನು ಯಾವುದೇ ದಾಖಲೆ ತೋರಿಸಿಲ್ಲ. ಅರ್ಜಿ ಜಮೀನಿನಲ್ಲಿ ಎರಡು ತೆಂಗಿನಗಿಡಗಳು ಇವೆ ಎಂದು ಹಾಗೂ

ಪ್ರತಿ ಗಿಡಕ್ಕೆ 25000/- ಆದಾಯ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ದಾಖಲೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

1 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು
ಬಾಗಲಕೋಟ, ಉಪಸ್ಥಿತಿ ಜಮಖಂಡಿ